O.S 224/2020
PW-1

ದಿನಾಂಕಃ **13.07.2026** ರಂದು ಸಾಕ್ಷಿಗೆ ಮದ್ಯಾಹ್ನ **3.45** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಟಿ.ಕೆ.ಆರ್. ವಕೀಲರಿಂದಃ**

ನಾನು ಪಿ.ಓ.ಪಿ ಕೆಲಸ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಆಶ್ರಯ ಯೋಜನೆಯಡಿ ನನ್ನ ತಾಯಿಗೆ ನಿವೇಶನ ಮಂಜೂರಾಗಿತ್ತು ಆ ಬಗ್ಗೆ ನನ್ನ ತಾಯಿ ಈ ದಾವೆ ಸಲ್ಲಿಸಿದ್ದಾಳೆ. ನಾವು ನಿರಾಶ್ರಿತರು ನಿವೇಶನ ಮಂಜೂರು ಮಾಡಬೇಕು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೆವು. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಪರುವಿನಪಾಳ್ಯದಲ್ಲಿ ನಮಗೆ ಜಮೀನು ಮತ್ತು ಮನೆ ಇರುವುದಿಲ್ಲ. ನನ್ನ ತಂದೆ ತಾಯಿಯ ಹೆಸರಿನಲ್ಲಿ **2** ರಿಂದ **3** ಎಕರೆ ಜಮೀನು ಮತ್ತು **2** ಮನೆ ಸಹ ಇವೆ ಎಂದರೆ ಒಂದು ಎಕರೆ ಜಮೀನು ಇದೆ. ಆ ರೀತಿ ಜಮೀನು ಮತ್ತು ಮನೆ ಇರುವುದರಿಂದ ನಾವು ನಿರಾಶ್ರಿತರು ಎಂದರೆ ಸರಿಯಲ್ಲ. ಕಗ್ಗಲಹಳ್ಳಿ ಗ್ರಾಮದ ಸರ್ವೆನಂಬರ್ **50** ರಲ್ಲಿ ನನ್ನ ತಾಯಿಗೆ ನಿವೇಶನ ಮಂಜೂರಾಗಿದೆ. ಸರ್ವೆ ನಂಬರ್ **50** ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ ನಂ **50** ರಲ್ಲಿ **30** ಗುಂಟೆ ಜಮೀನು ಇದ್ದು ಅದರಲ್ಲಿ ಪ್ರತಿವಾದಿ ವ್ಯವಸಾಯ ಮಾಡುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಗೋಮಾಳ ಜಮೀನು. ಎಷ್ಟು ಎಕರೆ ಗೋಮಾಳ ಎಂದು ನನಗೆ ಗೊತ್ತಿಲ್ಲ. ಸ ನಂ **50** ರಲ್ಲಿ **1** ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿರುವುದರಿಂದ ಸಾಗುವಳಿ ಚೀಟಿ ಕೋರಿ **1998** ರಲ್ಲಿ ಅರ್ಜಿಯೂ ಸಹ ಸಲ್ಲಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಅಳತೆಯನ್ನು ಮಾಡಿ ಪ್ರತಿವಾದಿಗೆ ನಕಾಶೆಯನ್ನು ಸಹ ತಹಶೀಲ್ದಾರ್ ರವರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕುಪತ್ರವನ್ನು ಸೃಷ್ಟಿ ಮಾಡಿಕೊಂಡು ಪ್ರತಿವಾದಿಯ ಜಮೀನಿನ ಬಳಿ ಹೋಗಿ ತೊಂದರೆ ಕೊಡಲು ಹೋದಾಗ ಪುಟ್ಟಮಾದಯ್ಯ ಮತ್ತು ಇತರರ ಮೇಲೆ ಹಾರೋಹಳ್ಳಿ ಪೋಲಿಸ್ ಠಾಣಾ ಅಪರಾಧ ಸಂಖ್ಯೆ **201/2020** ಒಂದು ಪೋಲಿಸ್ ದೂರು ಸಹ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಗಲಾಟೆ ಆದಾಗ ತಹಶೀಲ್ದಾರ್ ರವರು ಸ್ಥಳಕ್ಕೆ ಬಂದಿದ್ದರು ಎಂದರೆ ನನಗೆ

O.S 224/2020
PW-1

ಗೊತ್ತಿಲ್ಲ. ನಿರಾಶ್ರಿತರಿಗೆ ನಿವೇಶನವನ್ನು ಹಂಚಲು ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿರಾಶ್ರಿತರಿಗೆ ಯಾವುದೇ ನಿವೇಶವನ್ನು ಹಂಚಿಕೆ ಮಾಡಿರುವುದಿಲ್ಲ, ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕಗ್ಗಲಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದ ನಾನು ಹಾಜರು ಮಾಡಿರುವ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಮದ್ಯಾಹ್ನ **3.55** ಗಂಟೆಗೆ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ.